**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ :: 78/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಜಯಮೂರ್ತಿ | **PW-02** |
| **ತಂದೆಯ ಹೆಸರು** | : | ದೇವೇಂದ್ರ | **CW-08** |
| **ವಯಸ್ಸು** | : | 66 ವರ್ಷ | |
| **ಉದ್ಯೋಗ** | : | ಬಸ್ ಏಜೆಂಟ್ | |
| **ವಾಸಸ್ಥಳ** | : | ಶೃಂಗೇರಿ. | |

**ದಿನಾಂಕಃ29-11-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

1. ಆರೋಪಿತರು ನನಗೆ ಗೊತ್ತು. ಚಾಸಾ-1 ಮತ್ತು ಚಾಸಾ-9 ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಈ ಪ್ರಕರಣದಲ್ಲಿ ನನ್ನನ್ನು ಪೋಲೀಸರು ವಿಚಾರಣೆ ಮಾಡಿರುವುದಿಲ್ಲ, ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**:: ಪಾಟೀ ಸವಾಲು :: ಎ.ಪಿ.ಪಿ ರವರಿಂದ ::**

ಈ ಪ್ರಕರಣದಲ್ಲಿ ಹೇಳಲಾಗಿರುವ ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದರು ಸಹ ಆರೋಪಿತರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ 16-11-2024 ರಂದು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಸದರಿ ದಿನಾಂಕದಂದು ದಾಖಲು ಮಾಡಿಕೊಂಡ ಹೇಳಿಕೆಯ ಭಾಗಾಂಶವನ್ನು ಈ ಕೆಳಗಿನಂತೆ ಓದಿ, ಹೇಳಿ ತೋರಿಸಲಾಯಿತು. '' ನಾನು ಸುಮಾರು 30 ವರ್ಷದಿಂದ …….. ……………………………ನೋಡಿದರೆ ಗುರುತಿಸುತ್ತೇನೆ.'' ಸದರಿ ಹೇಳಿಕೆಯ ಭಾಗಾಂಶವನ್ನು ನಿಪಿ -5 ಎಂದು ಗುರುತಿಸಲಾಯಿತು.

ಸದರಿ ಅಪಘಾತವನ್ನು ಆರೋಪಿತರೇ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.